| Form No.4 (Civil) Deposition Sheets (R.P.No.57) |
|---|

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ: 3/2014

ಫ್ರಾ.ಸಾ. 3 ಚಾ.ಸಾ. 4

| | | |
|---|---|---|
| ಹೆಸರು | : | ಪರಶುರಾಮ |
| ತಂದೆಯ ಹೆಸರು | : | ತಿಮ್ಮಯ್ಯ |
| ವಯಸ್ಸು | : | 71 ವರ್ಷ |
| ಉದ್ಯೋಗ | : | ನ್ವಿತ್ತ ಶಿರಸ್ತೆದಾರರು ತಹಶೀಲ್ದಾರ ಕಚೇರೀ |
| ವಾಸ | : | ರಾಯಚೂರು |

**ಪ್ರಮಾಣ ವಚನ ಭೋಧಿಸಿದ ದಿನಾಂಕಃ 22-08-2025**
**ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ**

ದಿಃ 17.12.2012 ರಿಂದ 31.07.2015 ರವರೆಗೆ ನಾನು ಶಹಾಪೂರ ತಹಶೀಲ್ದಾರ ಕಚೇರಿಯಲ್ಲಿ ಶಿರಸ್ತೆದಾರ ಅಂತಾ ಕರ್ತವ್ಯ ನಿರ್ವಹಿಸಿದ್ದೇನೆ.

2. ಚಾಸಾ- 5 ಕವಿತಾ ನಮ್ಮ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ದಿನಾಂಕ:15-03-2014 ರಂದು ನಾನು ನಮ್ಮ ಕಾರ್ಯಾಲಯದ ಮೇಲಿನ ಮಹಡಿಯ ಕೋಣೆಯಲ್ಲಿ ಕರ್ತವ್ಯನಿರ್ವಸುತ್ತಿರುವಾಗ ಮಧ್ಯಾಹ್ನ 1-00 ಗಂಟೆಗೆ ನಮ್ಮ ಕೋಣೆಯ ಬಾಗಿಲ ಹತ್ತಿರ ನಿಂತಾಗ ಒಮ್ಮೆಲೆ 3-4 ಜನರು ಬಂದು ನಮ್ಮ ಕಚೇರಿಯಿಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪ್ರ.ದ.ಸ ರಾದ ಮಲ್ಲಪ್ಪ ವಗ್ಗಿ ಇವರ ಎರಡು ಕೈಗಳನ್ನು ಹಿಡಿದುಕೊಂಡರು. ನಾನು ಗಾಬರಿಯಾಗಿ ಹೋಗಿ ನೋಡಿದೆ. ಆಗ ಅವರಲ್ಲಿ ಒಬ್ಬರು ನಾನು ಬಿ.ಬಿ.ಪಟೇಲ. ಪೊಲೀಸ ಇನ್ಸೆಪ್ಟೆಕ್ಟರ, ಕರ್ನಾಟಕ ಲೋಕಾಯುಕ್ತ ಯಾದಗಿರ ಇದ್ದೇನೆ. ಇನ್ನುಳಿದವರು ನಮ್ಮ ಠಾಣೆಯ ಸಿಬ್ಬಂದಿ ಜನರು ಹಾಗು ಪಂಚ ಸಾಕ್ಷಿದಾರರು ಇದ್ದಾರೆ. ನೀವು ಈದೀಗ ಮಹ್ಮದ್ ಇಸ್ಮಾಯಿಲ ಎಂಬುವವರಿಂದ ಅವರ 11 ನೇ ಕಾಲಂನಲ್ಲಿನ ತಿದ್ದುಪಡಿ ಸಲುವಾಗಿ ರೂ. 10,000/- ಲಂಚದ ಹಣ ಪಡೆಯುವಾಗ ನಿಮಗೆ ಟ್ರ್ಯಾಪ್ ಮಾಡಲಾಗಿದೆ ಅಂತ ಹೇಳಿದರು. ನಂತರ ಲೋಕಾಯುಕ್ತ ಪೋಲೀಸರು ಮಲ್ಲಪ್ಪ ವಗ್ಗಿ ಇವರನ್ನು ಹಿಡಿದುಕೊಂಡು ಅವರು ಕುಳಿತುಕೊಳ್ಳುವ ಸ್ಥಳಕ್ಕೆ ಕರೆತಂದು ಕೂಡಿಸಿದರು. ಆ ಪೊಲೀಸ ಇನ್ಸೆಪ್ಟೆಕ್ಟರ ಸಲಹೆ ಮೇರೆಗೆ ಸಿಬ್ಬಂದಿ ಶ್ರೀನಿವಾಸ.ಹೆಚ್.ಸಿ. ಎಂಬುವವರು ಸೋಡಿಯಂ ಧ್ರಾ ವಣ ತಯಾರಿಸಿದರು. ಹಾಗು ಸದ್ರಿ ಧ್ರಾವಣದಲ್ಲಿ ಮಲ್ಲಪ್ಪ ವಗ್ಗಿ ಇವರ ಎರಡು

ಕೈಬೆರಳುಗಳನ್ನು ಅದ್ದಿತೊಳೆಸಿದರು. ಆಗ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ಬದಲಾಯಿತು. ನಂತರ ಮಲ್ಲಪ್ಪ ಇವರಿಗೆ ಲಂಚದ ಹಣ ಪಡೆದಿದ್ದು ಎಲ್ಲಿ ಅಂತಾ ಕೇಳಿದಾಗ ಅವರು ಲಂಚದ ಹಣವನ್ನು ಅವರ ಟೇಬಲದ ಡ್ರಾದಲ್ಲಿ ಇರುತ್ತವೆ ಅಂತ ಹೇಳಿದ ಮೇರೆಗೆ ಪೋಲೀಸರು ಮತ್ತು ಪಂಚ ಸಾಕ್ಷಿದಾರರು ನೋಟುಗಳನ್ನು ಹೊರತೆಗೆದರು. ಸದ್ರಿ ಹಣವನ್ನು ಪಂಚರ ಸಮಕ್ಷಮ ಜಪ್ತಿಪಡಿಸಿಕೊಂಡರು. ಲಂಚದ ಹಣವಿಟ್ಟ ಜಾಗೆಯನ್ನು ಹತ್ತಿಯಿಂದ ಸ್ವಾಬ್ ಮಾಡಿ ಸೋಡಿಯಂ ಕಾರ್ಬೋನೆಟ ದ್ರಾವಣದಲ್ಲಿ ಅದ್ದಿ ತೊಳೆದಾಗಿ ತಿಳಿ ಗುಲಾಬಿ ಬಣ್ಣಕ್ಕೆ ಬದಲಾಯಿತು. ಸದ್ರಿ ಎಲ್ಲಾ ದ್ರಾವಣವನ್ನು ಪ್ರತ್ಯೇಕ ತಲಾ 2 ಬಾಟಲಿಗಳಲ್ಲಿ ಸಂಗ್ರಹಿಸಿ ಸಾಕ್ಷಿದಾರರ ಸಹಿ ಪಡೆದರು.

3. ಲೋಕಾಯುಕ್ತ ಪೋಲೀಸರು ಆರೋಪಿಯನ್ನು ಪಿರ್ಯಾದಿಯ ಕೆಲಸಕ್ಕೆ ಸಂಬಂದಪಟ್ಟ ದಾಖಲಾತಿಗಳನ್ನು ಹಾಜರುಪಡಿಸುವಂತೆ ಕೇಳಿದ್ದು, ಅದರಂತೆ ಆರೋಪಿ ಹಾಜರುಪಡಿಸಿದ್ದು, ಅವುಗಳು ಈ ಪ್ರಕರಣಕ್ಕೆ ಸಂಬಂಧಪಟ್ಟವುಗಳಾಗಿದ್ದು. ಅವುಗಳನ್ನು ಝುರಾಕ್ಷ ಪ್ರತಿ ತಯಾರಿಸಿ ಸದರಿ ಪ್ರತಿಗಳ ಮೇಲೆ ಪಂಚರು. ಪೊಲೀಸ್ ಇನ್ಸಪೇಕ್ಟರ ಇವರು ಸಹಿ ಮಾಡಿದ ನಂತರ ಅದಕ್ಕೆ ನಾನು ದೃಢಿಕರಣ ಸಹಿ ಮಾಡಿ ಅವುಗಳನ್ನು ಜಪ್ತಿಪಡಿಸಿಕೊಂಡರು. ಸದರಿ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಕಡತದಲ್ಲಿನ ದೃಢೀಕೃತ ದಾಖಲೆಗಳನ್ನು ತೋರಿಸಲಾಗಿ ಅದರಲ್ಲಿರುವ ಸಹಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಈಗಾಗಲೇ ನಿಪಿ.34 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.34(ಸಿ) ಎಂದು ಗುರುತಿಸಲಾಯಿತು. ನಿಪಿ-34ರ ಮುಖ ಪತ್ರದ ಜೊತೆ 07 ದಾಖಲೆಗಳನ್ನು ದೃಢೀಕರಸಿ ನೀಡಿರುತ್ತೇನೆ ಎಂದು ನೋಡಿ ಗುರುತಿಸುತ್ತಾರೆ.

4. ಆರೋಪಿ ಮಲ್ಲಪ್ಪ ವಗ್ಗಿ, ಎಫ್.ಡಿ.ಸಿ. ಇವರಿಗೆ ದಸ್ತಗಿರಿ ಮಾಡಿದ ಬಗ್ಗೆ ದಸ್ತಗಿರಿ ನೋಟಿಸ್ ಮೇಲೆ ನನ್ನ ಸಹಿ ಪಡೆದುಕೊಂಡರು. ಸದರಿ ನೋಟಿಸ ತೋರಿಸಿದರೆ ಗುರುತಿಸುತ್ತೇನೆ

5. ನಂತರ ಪಿ.ಐ.ರವರು ನಮಗೆ ಪಿರ್ಯಾದಿ ಹಣವಹಿಸಿಕೊಡುವ ವೇಳೆ ಕೊಟ್ಟ ವೈಸ್ ರಿಕಾರ್ಡರ ಹಾಜರ ಪಡಿಸುವಂತೆ ತಿಳಿಸಿದ ಮೇರೆಗೆ ಪಿರ್ಯಾಧಿಯು ಹಾಜರಪಡಿಸಿದ್ದು ಅದರಲ್ಲಿ ಹಣ ಕೊಡುವ ವೇಳೆ ಪಿರ್ಯಾದಿ ಮತ್ತು ಆರೋಪಿತ ನೌಕರನ ಮಧ್ಯ ನಡೆದ ಸಂಭಾಷಣೆ ಮಾಡಿದನ್ನು ಕೇಳಿ ಗುರುತಿಸಲು ಹೇಳಿದ್ದು, ಸದರಿ ಧ್ವನಿ ಮುದ್ರಣದಲ್ಲಿ ಹಿಂದಿಯಲ್ಲಿ ಮಾತನಾಡಿದ್ದರು, ಫಿರ್ಯಾದಿಯು : ಪೈಸೆ ಲಾಯ ಹುಂ, ಮಂಡೆ ಕಾಮ ಕರಕೇ ದೆವ್ರೂ. ಎಂದು ಹೇಳಿದ್ದು ಅದಕ್ಕೆ ಆರೋಪಿಃ ಮಂಡೆ ಹಾಲಿಡೆ ಹೈ ನಹಿ ಹೋತಾ ಎಂದು ಹೇಳಿರುತ್ತಾರೆ. ನಾನು ಆರೋಪಿಯ ದ್ವನಿ ಇದೆ ಎಂದು ಕೇಳಿ ಗುರುತಿಸಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿ ಮಲ್ಲಪ್ಪ ಇರುತ್ತಾರೆ ಎಂದು ಸಾಕ್ಷಿ ಗುರುತಿಸಿರುತ್ತಾರೆ.

6. ಈ ಎಲ್ಲಾ ನಡಾವಳಿಗಳನ್ನು ಪೋಲೀಸರು ಬೆರಳಚ್ಚು ಮಾಡಿಸಿ ಪಂಚರ ಸಹಿ ಪಡೆದಿರುತ್ತಾರೆ. ನಂತರ ಮಲ್ಲಪ್ಪ ಇವರನ್ನು ಕರೆದುಕೊಂಡು ಯಾದಗಿರಗೆ ಹೋದರು. ಈ ಬಗ್ಗೆ ನಾನು ಲೋಕಾಯುಕ್ತ ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ. ಹೇಳಿಕೆಯಲ್ಲಿ ಇದ್ದ ಸಂಗತಿ ಸತ್ಯವಾಗಿರುತ್ತವೆ.

## ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಡಿ.ವಿ ವಕೀಲರಿಂದ

7. ಪಂಚನಾಮೆಯಲ್ಲಿ ನನ್ನ ಸಹಿ ಇಲ್ಲ ಎಂದರೆ ಸರಿ. ಸಂಭಾಷಣೆಯ ಸಿ.ಡಿ ಮೇಲೆ ನನ್ನ ಸಹಿ ಇಲ್ಲಾ ಎಂದರೆ ಸರಿ. ಧ್ವನಿ ಗುರುತಿಸುವ ಬಗ್ಗೆ ನನಗೆ ಯಾವುದೇ ವಿಶೇಷ ತರಬೇತಿ ಇಲ್ಲ ಎಂದರೆ ಸರಿ. ಆರೋಪಿ ಮಲ್ಲಪ್ಪನವರು ದೂರವವಣೆಯಲ್ಲಿ ಮಾತನಾಡಿದರೆ ವಯಸ್ಸಾದ ಕಾರಣ ಗುರುತಿಸಬಲು ಬರುವುದಿಲ್ಲ ಎಂದರೆ ಸರಿಯಲ್ಲ. ವಯಸ್ಸಾದ ಕಾರಣ ಈಗಿನ ಧ್ವನಿ ಬದಲಾಗಿ ಕ್ಷಿಣಿಸಿರುತ್ತದೆ ಎಂದರೆ ಸರಿ. ಈ ಪ್ರಕರಣದ ಕಾಳಿಯ ಸಮಯುದಲ್ಲಿ ನನಗೆ ಮತ್ತು ಆರೋಪಿಗೆ ವಯಸ್ಸಾಗಿದ್ದು ಧ್ವನಿ ಕ್ಷಿಣಿಸಿತ್ತು ಎಂದರೆ ಸರಿ. ನಾನು ನಿಖರವಾಗಿ ಆರೋಪಿತರ ಧ್ವನಿ  ಇದೇ ಎಂದು ಗುರುತಿಸಲು ಬರುವುದಿಲ್ಲ ಎಂದರೆ ಸರಿ. ಆ ಕಾಲಕ್ಕೆ ತಹಶೀಲ್ದಾರ ರಮೇಶ ಬಾಬು ಇದ್ದರು. ತಹಶೀಲ್ದಾರ ಕಚೇರಿ ಬೆಂಗಳೂರು - ಗುಲ್ಬರ್ಗಾ ಮುಖ್ಯ ರಸ್ತೆ ಮೇಲೆ ಇರುತ್ತದೆ ಎಂದರೆ ಸರಿ. ಕಾಂಪೌಂಡ ಗೋಡೆ ಹತ್ತಿರ ನಿಂತು ನೋಡಿದರೆ ನಮ್ಮ ಕಚೇರಿ ಕೋಣೆಯ ಒಳಗೆ ಕಾಣುವುದಿಲ್ಲ ಎಂದರೆ ಸರಿ. ಕಾಂಪೌಂಡ ಒಳಗೆ ಬಂದು ನಿಂತು ನೋಡಿದರೂ ನಮ್ಮ ಕಚೇರಿ ಕೋಣೆಯ ಒಳಗೆ ಕಾಣುವುದಿಲ್ಲ ಎಂದರೆ ಸರಿ.

8. ದಾಳಿಯ ಸಮಯದಲ್ಲಿ ಚುನಾವಣೆ ಇದ್ದದ್ದು ನನಗೆ ನೆನಪಿಲ್ಲ. ಮಲ್ಲಪ್ಪ ಬಾಗಿಲು ಬಳಿ ನಿಂತಿದ್ದಾಗ ನಮ್ಮ ಕೋಣೆಗೆ ಯಾರು ಬಂದಿರಲಿಲ್ಲ ಎಂದರೆ ಸರಿ. ಆರೋಪಿಯನ್ನು ಬಾಗಿಲು ಬಳಿ ಹಿಡಿದುಕೊಂಡಿದ್ದಾರೆ ಎಂದರೆ ಸರಿ.

9. ಖಾತೆ ಬದಲಾವಣೆ ಮಾಡುವ ಅಧಿಕಾರ ನನಗಾಗಲೀ ಮತ್ತು ಆರೋಪಿಗಾಗಲಿ ಇಲ್ಲ ಎಂದರೆ ಸರಿ. ಮಲ್ಲಪ್ಪ ವಗ್ಗಿ ಇವರ ಎರಡು ಕೈಬೆರಳುಗಳನ್ನು ಅದ್ದಿದಾಗ "ಧ್ರಾವಣ  ತಿಳಿ ಗುಲಾಬಿ ಬಣ್ಣಕ್ಕೆ ಬದಲಾಯಿತು " ಎಂಬುದು ನನ್ನ ಹೇಳಿಕೆಯಲ್ಲಿ ಇಲ್ಲ ಎಂದರೆ ಸರಿ.  ನನ್ನ ಸಮಕ್ಷಮ ಯಾವುದೇ ನೋಟುಗಳನ್ನು ತೋರಿಸಿಲ್ಲ ಮತ್ತು ಅವುಗಳನ್ನು ಧ್ರಾವಣದಲ್ಲಿ ತೊಳೆದಿಲ್ಲ ಎಂದರೆ ನಾನು ನೋಡಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಸಂಭಾಷಣೆಯಲ್ಲಿ ಲಂಚ ಕೇಳಿದ ಬಗ್ಗೆ ಮಾತು ಇಲ್ಲಾ ಎಂದರೆ ಸರಿಯಲ್ಲ.

10. ದಿನಾಂಕ:15-03-2014 ರಂದು ನಾನು ನಮ್ಮ ಕಾರ್ಯಾಲಯದ ಮೇಲಿನ ಮಹಡಿಯ ಕೋಣೆಯಲ್ಲಿ ಕರ್ತವ್ಯನಿರ್ವಸುತ್ತಿರುವಾಗ ಮಧ್ಯಾಹ್ನ 1-00 ಗಂಟೆಗೆ ನಮ್ಮ ಕೋಣೆಯ  ಬಾಗಿಲ ಹತ್ತಿರ ನಿಂತಾಗ ಒಮ್ಮೆಲೆ  3-4 ಜನರು ಬಂದು ನಮ್ಮ ಕಚೇರಿಯಿಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪ್ರ.ದ.ಸ ರಾದ ಮಲ್ಲಪ್ಪ ವಗ್ನಿ ಇವರ ಎರಡು ಕೈಗಳನ್ನು ಹಿಡಿದುಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಗಾಬರಿಯಾಗಿ ಹೋಗಿ ನೋಡಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ಅವರಲ್ಲಿ ಒಬ್ಬರು ನಾನು ಬಿ.ಬಿ.ಪಟೇಲ. ಪೊಲೀಸ ಇನ್ಸೆಪೆಕ್ಟರ, ಕರ್ನಾಟಕ ಲೋಕಾಯುಕ್ತ ಯಾದಗಿರ ಇದ್ದೇನೆ. ಇನ್ನುಳಿದವರು ನಮ್ಮ ಠಾಣೆಯ ಸಿಬ್ಬಂದಿ ಜನರು ಹಾಗು ಪಂಚ ಸಾಕ್ಷಿದಾರರು ಇದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.  ನೀವು ಈದೀಗ ಮಹ್ಮದ್ ಇಸ್ಮಾಯಿಲ

ಎಂಬುವವರಿಂದ ಅವರ 11 ನೇ ಕಾಲಂನಲ್ಲಿನ ತಿದ್ದುಪಡಿ ಸಲುವಾಗಿ ರೂ. 10,000/- ಲಂಚದ ಹಣ ಪಡೆಯುವಾಗ ನಿಮಗೆ ಟ್ರ್ಯಾಪ್ ಮಾಡಲಾಗಿದೆ ಅಂತ ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಲೋಕಾಯುಕ್ತ ಪೋಲೀಸರು ಮಲ್ಲಪ್ಪ ವಗ್ಗಿ ಇವರನ್ನು ಹಿಡಿದುಕೊಂಡು ಅವರು ಕುಳಿತುಕೊಳ್ಳುವ ಸ್ಥಳಕ್ಕೆ ಕರೆತಂದು ಕೂಡಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಪೊಲೀಸ ಇನ್ಸ್ಪೆಕ್ಟರ ಸಲಹೆ ಮೇರೆಗೆ ಸಿಬ್ಬಂದಿ ಶ್ರೀನಿವಾಸ.ಹೆಚ್.ಸಿ. ಎಂಬುವವರು ಸೋಡಿಯಂ ದ್ರಾ ವಣ ತಯಾರಿಸಿದರು ಹಾಗು ಸದ್ರಿ ದ್ರಾವಣದಲ್ಲಿ ಮಲ್ಲಪ್ಪ ವಗ್ಗಿ ಇವರ ಎರಡು ಕೈಬೆರಳುಗಳನ್ನು ಅದ್ದಿತೊಳೆಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ಬದಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಮಲ್ಲಪ್ಪ ಇವರಿಗೆ ಲಂಚದ ಹಣ ಪಡೆದಿದ್ದು ಎಲ್ಲಿ ಅಂತಾ ಕೇಳಿದಾಗ ಅವರು

ಲಂಚದ ಹಣವನ್ನು ಅವರ ಟೇಬಲದ ಡ್ರಾದಲ್ಲಿ ಇರುತ್ತವೆ ಅಂತ ಹೇಳಿದ ಮೇರೆಗೆ ಪೋಲೀಸರು ಮತ್ತು ಪಂಚ ಸಾಕ್ಷಿದಾರರು ನೋಟುಗಳನ್ನು ಹೊರತೆಗೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದ್ರಿ ಹಣವನ್ನು ಪಂಚರ ಸಮಕ್ಷಮ ಜಪ್ತಿಪಡಿಸಿಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಲಂಚದ ಹಣವಿಟ್ಟ ಜಾಗೆಯನ್ನು ಹತ್ತಿಯಿಂದ ಸ್ವಾಬ್ ಮಾಡಿ ಸೋಡಿಯಂ ಕಾರ್ಬೊನೇಟ ದ್ರಾವಣದಲ್ಲಿ ಅದ್ದಿ ತೊಳೆದಾಗಿ ತಿಳಿ ಗುಲಾಬಿ ಬಣ್ಣಕ್ಕೆ ಬದಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದ್ರಿ ಎಲ್ಲಾ ದ್ರಾವಣವನ್ನು ಪ್ರತ್ಯೇಕ ತಲಾ 2 ಬಾಟಲಿಗಳಲ್ಲಿ ಸಂಗ್ರಹಿಸಿ ಸಾಕ್ಷಿದಾರರ ಸಹಿ ಪಡೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

11. ಲೋಕಾಯುಕ್ತ ಪೋಲೀಸರು ಆರೋಪಿಯನ್ನು ಪಿರ್ಯಾದಿಯ ಕೆಲಸಕ್ಕೆ ಸಂಬಂದಪಟ್ಟ ದಾಖಲಾತಿಗಳನ್ನು ಹಾಜರುಪಡಿಸುವಂತೆ ಕೇಳಿದ್ದು, ಅದರಂತೆ ಆರೋಪಿ ಹಾಜರುಪಡಿಸಿದ್ದು, ಅವುಗಳು ಈ ಪ್ರಕರಣಕ್ಕೆ ಸಂಬಂಧಪಟ್ಟವುಗಳಾಗಿದ್ವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವುಗಳನ್ನು ಝುರಾಕ್ಷ ಪ್ರತಿ ತಯಾರಿಸಿ ಸದರಿ ಪ್ರತಿಗಳ ಮೇಲೆ ಪಂಚರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸ್ ಇನ್ಸಪೇಕ್ಟರ ಇವರು ಸಹಿ ಮಾಡಿದ ನಂತರ ಅದಕ್ಕೆ ನಾನು ದೃಢಿಕರಣ ಸಹಿ ಮಾಡಿ ಅವುಗಳನ್ನು ಜಪ್ತಿಪಡಿಸಿಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

12. ಆರೋಪಿ ಮಲ್ಲಪ್ಪ ವಗ್ಗಿ ಎಫ್.ಡಿ.ಸಿ. ಇವರಿಗೆ ದಸ್ತಗಿರಿ ಮಾಡಿದ ಬಗ್ಗೆ ದಸ್ತಗಿರಿ ನೋಟಿಸ್ ಮೇಲೆ ನನ್ನ ಸಹಿ ಪಡೆದುಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

13. ನಂತರ ಪಿ.ಐ.ರವರು ನಮಗೆ ಪಿರ್ಯಾದಿ ಹಣವಹಿಸಿಕೊಡುವ ವೇಳೆ ಕೊಟ್ಟ ವೈಸ್ ರಿಕಾರ್ಡರ ಹಾಜರ ಪಡಿಸುವಂತೆ ತಿಳಿಸಿದ ಮೇರೆಗೆ ಪಿರ್ಯಾಧಿಯು ಹಾಜರಪಡಿಸಿದ್ದು ಅದರಲ್ಲಿ ಹಣ ಕೊಡುವ ವೇಳೆ ಪಿರ್ಯಾದಿ ಮತ್ತು ಆರೋಪಿತ ನೌಕರನ ಮಧ್ಯ ನಡೆದ ಸಂಭಾಷಣೆ ಮಾಡಿದನ್ನು ಕೇಳಿ ಗುರುತಿಸಲು ಹೇಳಿದ್ದು, ಸದರಿ ಧ್ವನಿ ಮುದ್ರಣದಲ್ಲಿ ಹಿಂದಿಯಲ್ಲಿ ಮಾತನಾಡಿದ್ದರು, ಫಿರ್ಯಾದಿಯು : ಪೈಸೆ ಲಾಯ ಹುಂ, ಮಂಡೆ ಕಾಮ ಕರಕೇ ದೆವ್ರೊ. ಎಂದು ಹೇಳಿದ್ದು ಅದಕ್ಕೆ ಆರೋಪಿಃ ಮಂಡೆ ಹಾಲಿಡೆ ಹೈ ನಹಿ ಹೋತಾ ಎಂದು ಹೇಳಿರುತ್ತಾರೆ. ನಾನು ಆರೋಪಿಯ ಧ್ವನಿ ಇದೆ ಎಂದು ಕೇಳಿ ಗುರುತಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

14. ಈ ಎಲ್ಲಾ ನಡಾವಳಿಗಳನ್ನು ಪೋಲೀಸರು ಬೆರಳಚ್ಚು ಮಾಡಿಸಿ ಪಂಚರ ಸಹಿ ಪಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಮಲ್ಲಪ್ಪ ಇವರನ್ನು ಕರೆದುಕೊಂಡು ಯಾದಗಿರಗೆ ಹೋದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

15. ನಾನು ಸರ್ಕಾರಿ ನೌಕರ ಇದ್ದು ನಾನು ಯಾವುದೇ ಘಟನೆ ನೋಡದಿದ್ದರೂ, ಯಾವುದೇ ದಾಖಲೆಗಳನ್ನು ದೃಢೀಕರಿಸಿ ನೀಡದಿದ್ದರೂ, ಯಾವುದೇ ಕ್ರಮ ನನ್ನ ಸಮಕ್ಷಮ ವಹಿಸದಿದ್ದರೂ ಲೋಕಾಯುಕ್ತ ಪೋಲೀಸರಿಗೆ ಹೆದರಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ,

<u>ಮರು ವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.